ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 6 ಜಂಟಿ ಸದನ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 20/4/21

# ನರ್ಸಿಂಗ್ ಅಕ್ರಮ ತನಿಖೆಗೆ

## ಎನ್.ರವಿಕುಮಾರ್ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿ ರಚನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ನರ್ಸಿಂಗ್ ಹಾಗೂ ಅನ್ವಯಿಕ ಆರೋಗ್ಯ ವಿಜ್ಞಾನ ಕಾಲೇಜುಗಳಿಗೆ ನೀಡಿದ ಅನುಮತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ತನಿಖೆಗೆ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿ ರಚನೆಯಾಗಿದೆ.



ಉಭಯ ಸದನಗಳ 14 ಶಾಸಕರು ಈ ಸಮಿತಿಗೆ ಸದಸ್ಯರಾಗಿದ್ದಾರೆ. ಇದರಲ್ಲಿ 8 ಜನ ಶಾಸಕರು ವೈದ್ಯರಾಗಿರುವುದು ವಿಶೇಷ. ಒಟ್ಟು 15 ಅಂಶಗಳು ಸೇರಿ ಸಮಿತಿ ಬಯಸುವ ಇತರ ವಿಷಯ, ಅಂಶಗಳನ್ನು ಪರಿಶೀಲಿಸುವ ಜವಾಬ್ದಾರಿ ಸಮಿತಿಗೆ ನೀಡಲಾಗಿದೆ. ಪರಿಶೀಲನಾಂಶಗಳ ತನಿಖೆ ನಡೆಸಿ ಸಲಹೆ-ಸೂಚನೆಗಳ ಸಹಿತ ವರದಿ ಸಲ್ಲಿಸಲು ಸಮಿತಿಗೆ 3 ತಿಂಗಳ ಕಾಲಾವಕಾಶ ನೀಡಲಾಗಿದೆ. ಈ ಕುರಿತು ವಿಧಾನ ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬಜೆಟ್ ಅಧಿವೇಶನದಲ್ಲಿ ಗದ್ದಲ:** ವಿಧಾನ ಪರಿಷತ್‌ನ ಬಜೆಟ್ ಅಧಿವೇಶನದಲ್ಲಿ ಎನ್.ರವಿಕುಮಾರ್ ಈ ವಿಷಯ ಪ್ರಸ್ತಾಪಿಸಿ ಸರ್ಕಾರದ ಗಮನಸೆಳೆದರೆ ಪ್ರತಿಪಕ್ಷ ಜೆಡಿಎಸ್ ಧರಣಿ ಹೂಡಿ, ಜಂಟಿ ಸದನ ಸಮಿತಿ ತನಿಖೆಗೆ ಪಟ್ಟು ಹಿಡಿದಿದ್ದರಿಂದ ಕೋಲಾಹಲಕ್ಕೆ ಕಾರಣವಾಗಿತ್ತು. ಹೊಸದಾಗಿ ಅನುಮತಿ ನೀಡಿದ 101 ಸೇರಿ 700ಕ್ಕೂ ಅಧಿಕ ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಲ್ಲಿ ಲೋಪ-ದೋಷಗಳು ಇರುವುದು ನಿಜವೆಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಒಪ್ಪಿಕೊಂಡಿದ್ದರು.

ಅಲ್ಲದೆ, ಎಲ್ಲ ಕಾಲೇಜುಗಳ ವಸ್ತುಸ್ಥಿತಿ ತಪಾಸಣೆಗೆ ತಜ್ಞರು, ಹಿರಿಯ ಅಧಿಕಾರಿಗಳನ್ನು ಒಳಗೊಂಡ ಉನ್ನತಮಟ್ಟದ ಸಮಿತಿ ರಚಿಸುವ ಭರವಸೆ ನೀಡಿದ್ದರು. ಸಭಾಪತಿ ಕೊಠಡಿಯಲ್ಲಿ ಎರಡು ಬಾರಿ ರಾಜಿಸಂಧಾನದ ಪ್ರಯತ್ನ ಫಲಿಸಲಿಲ್ಲ. ಧರಣಿನಿರತ ಜೆಡಿಎಸ್ ಸದಸ್ಯರು ಪಟ್ಟು ಸಡಿಲಿಸದ ಕಾರಣ ಸಿಎಂ ಬಿಎಸ್‌ವೈ ಮಧ್ಯೆ ಪ್ರವೇಶಿಸಿ, ಜಂಟಿ ಸದನ ಸಮಿತಿಗೆ ಒಪ್ಪಿಗೆ ನೀಡುವ ಮೂಲಕ ಬಿಕ್ಕಟ್ಟಿಗೆ ತೆರೆಎಳೆದಿದ್ದರು.

### ಸಮಿತಿಯ ಸದಸ್ಯರು

ಎನ್. ರವಿಕುಮಾರ್ (ಅಧ್ಯಕ್ಷ), ಎಸ್.ವಿ. ಸಂಕನೂರ್, ಕೆ.ಟಿ. ಶ್ರೀಕಂಠೇಗೌಡ, ಆರ್. ಧರ್ಮಸೇನಾ, ಯು.ಬಿ. ವೆಂಕಟೇಶ್, ಎ.ಎಸ್. ಪಾಟೀಲ್ ನಡಹಳ್ಳಿ, ಡಾ. ಅವಿನಾಶ್ ಜಾಧವ್, ಡಾ. ಶಿವರಾಜ್ ಪಾಟೀಲ್, ಅರವಿಂದ ಬೆಲ್ಲದ, ಡಾ. ಸಿ.ಎಂ. ರಾಜೇಶ್‌ಗೌಡ, ಡಾ. ಭರತ್ ಶೆಟ್ಟಿ, ಡಾ. ಅಂಜಲಿ ನಿಂಬಾಳ್ಕರ್, ಡಾ. ಎಚ್.ವಿ. ರಂಗನಾಥ್, ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಕೆ. ಶ್ರೀನಿವಾಸಮೂರ್ತಿ

### ಪ್ರಮುಖ ಪರಿಶೀಲನಾ ಅಂಶ

1 2020-21ನೇ ಸಾಲಿನಲ್ಲಿ ನರ್ಸಿಂಗ್ ಮತ್ತು ಅಲೈಡ್ ಸೈನ್ಸಸ್ ಕಾಲೇಜುಗಳಿಗೆ ನೀಡಿರುವ ಅನುಮತಿಯಲ್ಲಿನ ಆಡಳಿತಾತ್ಮಕ ಲೋಪ-ದೋಷ, ರಾಜ್ಯದಲ್ಲಿ ಈವರೆಗೂ ಪ್ರಾರಂಭವಾಗಿರುವ ಕಾಲೇಜುಗಳ ಜಿಲ್ಲಾವಾರು ಸ್ಥಿತಿಗತಿ, ಅವ್ಯವಹಾರಗಳ ಸಮಗ್ರ ಪರಿಶೀಲನೆ ಹಾಗೂ ಸರಿಪಡಿಸಲು ಸೂಕ್ತ ನಿರ್ದೇಶನ.

2 ಕಾಲೇಜುಗಳ ಗುಣಮಟ್ಟ, ಮೂಲಸವಲತ್ತು, ಪ್ರವೇಶ, ವಿದ್ಯಾರ್ಥಿಗಳ ವ್ಯಾಸಂಗ. ಹಾಜರಿಗೆ ಅನುಸರಿಸುತ್ತಿರುವ ಮಾನದಂಡ

3 ಯಾವ ಯಾವ ಕಾಲೇಜುಗಳಲ್ಲಿ ಹೊರ ರಾಜ್ಯಗಳ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ, ಹಾಜರಿ.

4 ಈ ಕಾಲೇಜುಗಳನ್ನು ತೆರೆಯಲು ಮಾರ್ಗಸೂಚಿ ಪಾಲಿಸಲಾಗಿದೆಯೆ?

5 ಎಂಸಿಐ ನಿಯಮಾವಳಿಗೆ ವಿರುದ್ಧ ಆಗಿರುವ ಕಾಲೇಜುಗಳನ್ನು ತೆರೆದಿರುವುದು